# ಎದೆಯ ತಂತಿಯ ಮೀಟಿ

■ ಸಂತೆಬೆನ್ನೂರು ಫೈಜ್ನಟ್ರಾಜ್



ಸಿಗರೇಟಿನ ಬೂದಿ ಈಗಲೋ ಆಗಲೋ ಬೀಳುವಂತೆ ನೆಲದೆಡೆ ಬಾಗಿತ್ತು. ಅದೆಷ್ಟು ಹೊತ್ತೋ ಪಫ್ ಎಳೆಯದೇ ರಾಹುಲ್ ತೋರು ಬೆರಳು ಮತ್ತು ಮಧ್ಯದ ಬೆರಳಿನ ನಡುವೆ ಅದನ್ನು ಹಿಡಿದು ಒಂದೋ ಎರಡೋ ಬಾರಿ ಎಳೆದು ಮೌನವಾಗಿದ್ದ. ಹೊಗೆ ತಾನು ಬಿಡದಿದ್ದರೂ ಉಸಿರಾಡಿದಂತೆಲ್ಲಾ ಮೌನವಾಗಿ ಮೂರು ಪದರಿನ ಸ್ಲೈಡಿಂಗ್ ಗ್ಲಾಸಿನ ಕಿಟಕಿಯಲ್ಲಿ ಮೆಲ್ಲನೆ ಹೊರ ಹೋಗುತ್ತಿತ್ತು. ಹೊರ ಹೋದ ಹೊಗೆ ಎಲ್ಲಿ ಹೋಗುತ್ತದೆ? ಯಾರಿಗೆ ಗೊತ್ತು? ಹೊರಗೆ ಗವ್ವೆನ್ನುವ ಕತ್ತಲು. ಸಮಯ ರಾತ್ರಿ ಒಂದು ಗಂಟೆಯೂ ದಾಟಿದೆ!

ಬ್ಯಾಂಕಿನ ಮ್ಯಾನೇಜರ್ ಸ್ಟಾಫಿನ ಎಲ್ಲಾ ಸಿಬ್ಬಂದಿಗೆ ರೌಂಡಾಗಿ ತಿರುಗುವ ಆರಾಮ್ ಚೇರ್ ತರಿಸಿದ್ದ. ರೇಟ್ ಕೇಳಿ ತನಗೂ ಮನೆಗೆಂದು ಒಂದು ತರಿಸಿಕೊಂಡಿದ್ದ. ಆ ಚೇರಲ್ಲೇ ಕೂತು ಆಗಿನಿಂದಲೂ ಸಿಗರೇಟು ಸೇದ್ತಾ... ಕತ್ತಲಿನೆಡೆ ದೃಷ್ಟಿಯಿಟ್ಟು ಮೌನ ಆವಾಹಿಸಿಕೊಂಡು ಕೂತಿದ್ದ. ಸಿಗರೇಟು ಸುಡ್ತಾ ಬಂದು ಬೆರಳ ಸಮೀಪಕ್ಕೆ ಬಂದಾಗ ರಾಹುಲ್ ವಾಸ್ತವಕ್ಕೆ ಬಂದ. ಬೆಡ್ ರೂಮಿಂದ ಸೀದಾ ಸ್ಟಡಿ ರೂಮಿಗೆ ಬಂದು ಕೂತಿದ್ದ. ಶಯನಗೃಹದ ತಾಕಲಾಟಗಳೇ ಅವನಿಗೀಗ ಸಿಗರೇಟಿನ ಸಂಗಕ್ಕೆ ಬೀಳುವಂತೆ ಮಾಡಿದ್ದೆಂದು ಅದೆಷ್ಟೋ ಬಾರಿ ಅಂದುಕೊಂಡಿದ್ದಾನೆ.

ದಿನವಿಡೀ ಆಫೀಸು. ಮೈ ಕೈ ಚಾಚಿಕೊಳ್ಳಲೂ ಪುರುಸೊತ್ತಿಲ್ಲ. ಅಂಡಿಗೆ ಅಂಟು ಹಾಕಿ ಕೂತಂತೆ ಕೆಲಸ. ಬೆಳಿಗ್ಗೆ ಹತ್ತಕ್ಕೆ ಬ್ಯಾಂಕು ಹೊಕ್ಕರೆ ಐದರ ತನಕ ಕೈಕಾಲು ಕಟ್ಟಿದ ಕರ್ಮ. ಸಾವಿರ ಜನ, ಸಾವಿರ ತರದ ತಲೆನೋವು, ಸಾವಿರಾರು ಮಾತುಗಳು. ಬರಿ ಮಾತುಗಳು ಬ್ಯಾಂಕಿನ ತುಂಬೆಲ್ಲಾ. ಬ್ಯಾಂಕಿನಲ್ಲಿ ವಹಿವಾಟು ನಗದು; ಅಲ್ಲಿನ ಸಿಬ್ಬಂದಿಯ ಮುಖವೂ ನಗದು! ಎರಡು ಸಾರಿ ಚಹಾ, ಅದರ ಜೊತೆಯಲ್ಲೇ ಸುಟ್ಟಷ್ಟು ಸಿಗರೇಟು. ಮಧ್ಯಾಹ್ನ ಮಡದಿ ವನಮಾಲಾ ಕಟ್ಟಿಕೊಟ್ಟ ಟಿಫಿನ್ ಸೇರಿದಷ್ಟು ತಿಂದು ಬಾಕ್ಸ್ ಮುಚ್ಚಿಡುವ ರಾಹುಲ್ ಎಂದೂ ಅದನ್ನು ಖಾಲಿ ಮಾಡಿದ ಉದಾಹರಣೆಯಿಲ್ಲ!

ಮನೆಗೆ ಬಂದರೆ ಮಗಳು ಪಾವನಿಯ ಮುಖ ನೋಡಿದ ಮೇಲೆಯೇ ರಾಹುಲ್ ಕೊಂಚ ನಿರಾಳನಾಗೋದು. ಐದು ವರ್ಷದ ಮಗಳ ನಗು ಅವನಿಗೆ ಎಷ್ಟೋ ಜನುಮದ ಎನರ್ಜಿ ಕೊಟ್ಟು ಸಲಹುತ್ತದೆ. ಕಾನ್ವೆಂಟಿಗೆ ಹೋಗೋ ಮಗಳು ಎಂದಿಗಿಂತ ಸ್ವಲ್ಪ ಹೊತ್ತು ಬರುವುದು ತಡವಾದರೆ ದುಃಖಿಸಿ ಅಳುವ, ಬಿಕ್ಕಳಿಸುವ, ಬೀದಿಗೇ ಬಂದು ಹತ್ತಾರು ಸಲ ಗಂಡನಿಗೆ ಫೋನ್ ಮಾಡುವ ವನಮಾಲಳ ಒದ್ದಾಟಕ್ಕೆ ವಿಚಿತ್ರವೆನಿಸಿದರೂ ಓಡಿ ಬಂದು ಮಗಳ ಕರೆದುಕೊಂಡು ಎದುರಿಗೆ ನಿಲ್ಲಿಸಿ, ಸಮಾಧಾನಪಡಿಸುತ್ತಿದ್ದ. ಇತ್ತೀಚಿಗೆ ಮನೆ ಬೇಗ ಸೇರುತ್ತಿದ್ದ. ವನಮಾಲ ಮಗಳನ್ನು ಅತಿ ಹಚ್ಚಿಕೊಂಡಿದ್ದಾಳೆ ಅಂದುಕೊಳ್ಳುತ್ತಿದ್ದ. ಮಡದಿಯಂತೆ ಮಗಳನ್ನು ಈತನೂ ಹಚ್ಚಿಕೊಂಡ, ಅವನಿಗೆ ಅವಳೇ ಅವನ ಪ್ರಪಂಚ. ಆಫೀಸಿನಲ್ಲಿ ಉಸಿರುಗಟ್ಟುವ ವಾತಾವರಣದಿಂದ ಒಂಚೂರು ಜೀವಂತಿಕೆ ಮನೆಯಿಂದ ಮಾತ್ರ.

ಎಂದೂ ಯಾರ ಗೆಳೆತನ ಬಯಸದ, ಯಾರನ್ನೂ ಹಚ್ಚಿಕೊಳ್ಳದ ಒಂಟಿ ಜೀವಿ ರಾಹುಲ್ ಎಂದಾದರೊಮ್ಮೆ ಸ್ಟಾಫಿನ ಜೊತೆ ಪಾರ್ಟಿ ಅದೂ ಇದೂ ಅಂತ ಮೂರು ತಿಂಗಳಿಗೋ, ಆರು ತಿಂಗಳಿಗೋ ಸೇರಿದರೆ ಜೀರಾನೋ, ಮಿರಿಂಡನೋ ಕುಡಿದು, ಎರಡು ಚಪಾತಿ ದಾಲ್, ಎಗ್ ಮಸಾಲ ತಿಂದು ಪಾರ್ಟಿ ಮುಗಿಯುವ ಮುನ್ನವೇ ಕಾರು ಹತ್ತಿ ಮನೆ ಕಡೆ ರಾತ್ರಿ ಹತ್ತರ ಒಳಗೆ ಸೇರಿಬಿಡುತ್ತಿದ್ದ. 'ವಿಚಿತ್ರ ಪ್ರಾಣಿ ಇವನು, ರಸಿಕತೆಯಿಲ್ಲ, ಮನೇಗೆ ಹೋಗಿ ಈಗ ಮೊಟ್ಟೆ ಇಡ್ತಾನೆ' ಅನ್ನೋ ಕೊಂಕಾಡುವ ಸ್ಟಾಫಿನ ಮಾತು ರಾಹುಲನಿಗೆ ಗೊತ್ತಾದರೂ ಮೌನ ಅಷ್ಟೇ